# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 240 (222)
2. ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 17.02.2022
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಎತ್ತಿನಹೊಳೆ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳು ಯಾವುವು; (ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಾವಧಿಯ ವಿವರ ನೀಡುವುದು; ಹಾಗೂ ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು) | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಎರಡು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. (ಕಾಮಗಾರಿಗಳ ಸಂಪೂರ್ಣ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>1) ಟಿ.ಜಿ.ಹಳ್ಳಿ & ರಾಮನಗರ ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿಯಿಂದ ಟಿ.ಜಿ.ಹಳ್ಳಿ ಜಲಾಶಯ, ರಾಮನಗರ ಜಿಲ್ಲೆಯ ರಾಮನಗರ, ಮಾಗಡಿ, ಚೆನ್ನಪಟ್ಟಣ ಮತ್ತು ಕನಕಪುರ ತಾಲ್ಲೂಕಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಕುಡಿಯುವ ನೀರನ್ನು ಒದಗಿಸುವುದು ಹಾಗೂ ನೆಲಮಂಗಲ ತಾಲ್ಲೂಕಿನ ಮರಳಕುಂಟೆ ಮತ್ತು ಮದಗ ಸಣ್ಣ ನೀರಾವರಿ ಕೆರೆಗಳಿಗೆ ಅದರ ಸಾಮರ್ಥ್ಯದ ಶೇ.50 ರಷ್ಟು ಅಂತರ್ಜಲ ಅಭಿವೃದ್ಧಿಗಾಗಿ ನೀರು ತುಂಬಿಸಲು ಯೋಜಿಸಲಾಗಿದೆ.<br><br>2) ಗೌರಿಬಿದನೂರು ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಗೌರಿಬಿದನೂರು ತಾಲ್ಲೂಕಿಗೆ, ತುಮಕೂರು ಜಿಲ್ಲೆಯ ಕೊರಟಗೆರೆ, ಮಧುಗಿರಿ ತಾಲ್ಲೂಕಿಗೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕುಗಳ ಆಯ್ದ ಸಣ್ಣ ನೀರಾವರಿ ಕೆರೆಗಳಿಗೆ ಅದರ ಸಾಮರ್ಥ್ಯದ ಶೇ.50ರಷ್ಟು ಅಂತರ್ಜಲ ಅಭಿವೃದ್ಧಿಗಾಗಿ ನೀರು ತುಂಬಿಸಲು ಯೋಜಿಸಲಾಗಿದೆ. |
| ಆ) | ಈ ಕಾಮಗಾರಿಗಳು ಪ್ರಸ್ತುತ ಯಾವ ಯಾವ ಹಂತಗಳಲ್ಲಿವೆ; ಈ ಕಾಮಗಾರಿಗಳಿಗಾಗಿ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು) | • ಟಿ.ಜಿ.ಹಳ್ಳಿ ಮತ್ತು ರಾಮನಗರ ಫೀಡರ್ ಕಾಲುವೆ ಕಾಮಗಾರಿಯನ್ನು ರೂ.1325.96 ಕೋಟಿಗಳಿಗೆ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಫೀಡರ್ ಕಾಲುವೆಯ ಒಟ್ಟು ಉದ್ದ 52.89 ಕಿ.ಮೀ ಇದ್ದು, ಈ ಪೈಕಿ ಇದುವರೆಗೂ 36.00 ಕಿ.ಮೀ ಪೈಪ್‌ಲೈನ್ ಹಾಗೂ ಪಂಪ್‌ಹೌಸ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಪ್ರಸ್ತುತ ಶೇ.70ರಷ್ಟು ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಇದುವರೆಗೂ ರೂ.826.43 ಕೋಟಿಗಳ ಮೊತ್ತದ ಆರ್ಥಿಕ ಪ್ರಗತಿ ಸಾಧಿಸಲಾಗಿದ್ದು, ಇದರಲ್ಲಿ ರೂ.551.29 ಕೋಟಿಗಳು ಪಾವತಿಯಾಗಿರುತ್ತದೆ. |
| ಇ) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಭಾಗದಲ್ಲಿ ಈ ಯೋಜನೆಯ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ | |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು) | • ಗೌರಿಬಿದನೂರು ಫೀಡರ್ ಕಾಲುವೆ ಕಾಮಗಾರಿಯನ್ನು ರೂ.863.48 ಕೋಟಿಗಳಿಗೆ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಫೀಡರ್ ಕಾಲುವೆಯ ಒಟ್ಟು ಉದ್ದ 81.60 ಕಿ.ಮೀ ಇದ್ದು, ಈ ಪೈಕಿ ಇದುವರೆಗೂ 63.00.ಕಿ.ಮೀ ಪೈಪ್ ಲೈನ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಪ್ರಸ್ತುತ ಶೇ.70 ರಷ್ಟು ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಇದುವರೆವಿಗೂ ರೂ.488.75 ಕೋಟಿಗಳ ಮೊತ್ತದ ಆರ್ಥಿಕ ಪ್ರಗತಿ ಸಾಧಿಸಲಾಗಿದ್ದು, ಇದರಲ್ಲಿ ರೂ.356.45 ಕೋಟಿಗಳು ಪಾವತಿಯಾಗಿರುತ್ತದೆ.<br>• ಮೇಲಿನ ಎರಡು ಕಾಮಗಾರಿಗಳಿಗಾಗಿ ಇಲಾಖಾ ನಿಯಮಾನುಸಾರ/ ಟೆಂಡರ್ ಷರತ್ತುಗಳನ್ವಯ ಕ್ರಮ ಜರುಗಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 2013ರ ಭೂಸ್ವಾಧೀನಕಾಯ್ದೆಯಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಹಾಗೂ ಅಡೆತಡೆಗಳನ್ನು ನಿವಾರಿಸಿಕೊಂಡು ಸೆಪ್ಟೆಂಬರ್–2022ರ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. |

**ಸಂಖ್ಯೆ: ಜಸಂಇ 11 ಡಬ್ಲ್ಯೂಎಲ್ಎ 2022**

**(ಗೋವಿಂದ ಎಂ. ಕಾರಜೋಳ)**
**ಜಲಸಂಪನ್ಮೂಲ ಸಚಿವರು**

## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಸ್ ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 240 (222)ಕ್ಕೆ ಅನುಬಂಧ

| ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳ ವಿವರ | | | | | | | | |
|---|---|---|---|---|---|---|---|---|
| | | | | | | | | (ರೂ.ಕೋಟಿಗಳಲ್ಲಿ) |
| ಕ್ರ ಸಂ | ಯೋಜನೆ/ಕಾಮಗಾರಿ ಹೆಸರು | ಅಂದಾಜು ಮೊತ್ತ | ಕರಾರು ಮೊತ್ತ | ಕರಾರು ಸಂಖ್ಯೆ ಮತ್ತು ದಿನಾಂಕ | ಗುತ್ತಿಗೆದಾರರ ಹೆಸರು | ನಿಗದಿ ಪಡಿಸಿದ ಕಾಲಾವಧಿ | ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನ | ಷರಾ |
| 1 | ಎತ್ತಿನಹೊಳೆ ಯೋಜನೆಯಡಿಯ ಟಿ.ಜಿ.ಹಳ್ಳಿ & ರಾಮನಗರ ಫೀಡರ್ ಕಾಲುವೆ (ಉದ್ದ 52.89 ಕಿ.ಮೀ) ಹಾಗೂ ಏತ ಘಟಕಗಳು ಒಳಗೊಂಡಂತೆ (ಉದ್ದ 12.06.ಕಿ.ಮೀ) ನಿರ್ಮಾಣ ಕಾಮಗಾರಿ | 1179.00 | 1325.96 | 48/2018-19 Dated:08-03-2019 | ಮೆ॥ ಎಸ್.ಎನ್.ಸಿ– ಎಮ್.ಇ.ಐ.ಎಲ್ (ಜೆ.ವಿ) | 24 ತಿಂಗಳು | 551.29 | ಕಾಮಗಾರಿ ಪ್ರಗತಿಯಲ್ಲಿದೆ |
| 2 | ಎತ್ತಿನಹೊಳೆ ಯೋಜನೆಯ ಗೌರಿಬಿದನೂರು ಫೀಡರ್ ಕಾಲುವೆ 0.00 ಕಿ.ಮೀ ಯಿಂದ 81.60 ಕಿ.ಮೀ ವರೆಗೆಎಂ.ಎಸ್ ಪೈಪುಗಳ ವಿತರಣೆ, ಅಳವಡಿಕೆ, ಪರೀಕ್ಷೆ ಹಾಗೂ ಸಿದ್ಧಪಡಿಸುವಿಕೆ ಹಾಗೂ ಅಡ್ಡ ಮೋರಿ ಕೆಲಸಗಳು ಒಳಗೊಂಡಂತೆ ಗೌರಿಬಿದನೂರು ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿ | 850.50 | 863.48 | 6/2019-20 Dated:3.10.2019 | ಮೆ॥ ಅಡು ಇನ್‌ಫ್ರಾ – ಎಸ್.ಎನ್.ಸಿ (ಜೆ.ವಿ) | 24 ತಿಂಗಳು | 356.45 | ಕಾಮಗಾರಿ ಪ್ರಗತಿಯಲ್ಲಿದೆ |
| | ಒಟ್ಟು ರೂ. | **2029.50** | **2189.44** | | | | **907.74** | |